ಶ್ರೀ ಬಿ.ಎಸ್.ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೆ, ಮಾನ್ಯ ಆಲಂಗೂರು ಶ್ರೀನಿವಾಸರವರು ಬಂದಿದ್ದಾರೆ. ಸಾಧ್ಯವಾದರೆ ಅವರಿಂದ ಹೇಳಿಕೆ ಕೊಡಿಸಬೇಕು. ಅವರು ಸ್ಟೇಟ್‌ಮೆಂಟ್ ಮಾಡಲಿ ಆ ನಂತರ ನಾನು ಮಾತನಾಡುತ್ತೇನೆ.

ಶ್ರೀ ಶ್ರೀನಿವಾಸ್ ಆರ್. (ತೋಟಗಾರಿಕಾ ಸಚಿವರು) :– ಮಾನ್ಯ ಅಧ್ಯಕ್ಷರೇ, ಏನು ವಿರೋಧ ಪಕ್ಷದ ಸದಸ್ಯರು ನನ್ನ ಬಗ್ಗೆ ಹೇಳಿಕೆ ಕೊಡಬೇಕೆಂದು ಒತ್ತಾಯ ಮಾಡಿದ್ದಕ್ಕೆ ಹೇಳುತ್ತಿದ್ದೇನೆ. ಬಹುಶಃ ಇದು ಸದನದ ಹೊರಗಡೆ ಈ ಟೀಕೆ ಟಿಪ್ಪಣಿಗಳು ರಾಜಕೀಯದಲ್ಲಿ ಕೊಡುವುದು ಸಹಜ. ನಾನು ಏನು ಮಾನ್ಯ ಜಾಲಪ್ಪನವರ ವಿರುದ್ಧ ಮಾಡಿರತಕ್ಕಂತಹ ರಾಜಕೀಯ ಆರೋಪ ವೈಯಕ್ತಿಕ ಅಲ್ಲ, ನನ್ನ ಕ್ಷೇತ್ರದಲ್ಲಿ ನಮ್ಮ ನಾಯಕರನ್ನು ಅಸಭ್ಯವಾಗಿ ಮಾತನಾಡಿರತಕ್ಕಂತಹ ಸಂದರ್ಭದಲ್ಲಿ ಆ ಒಂದು ವೇದಿಕೆಗೂ, ನಮ್ಮ ನಾಯಕರಿಗೂ ಸಂಬಂಧ ಇಲ್ಲದೆ ಇರತಕ್ಕಂತಹ ಸಂದರ್ಭದಲ್ಲಿ ಪ್ರತ್ಯೇಕವಾಗಿ ನಮ್ಮ ಸರ್ಕಾರದ ವಿರುದ್ಧ ನಮ್ಮ ನಾಯಕರ ವಿರುದ್ಧ ಹೇಳಿಕೆಯನ್ನು ದೂಷಣೆಗಳನ್ನು ಮಾಡಿದ್ದಕ್ಕೋಸ್ಕರ ನಾನು ಒಬ್ಬ ಜಿಲ್ಲೆಯ ಮಂತ್ರಿಯಾಗಿ ಅದನ್ನು ಸಮರ್ಥಿಸಬೇಕೆಂದು ರಾಜಕೀಯ ಹೇಳಿಕೆಯನ್ನು ಕೊಟ್ಟಿದ್ದೇನೆ ಹೊರತು ಯಾವುದೇ ವ್ಯಕ್ತಿಯ ಮೇಲಾಗಲಿ, ಅಥವಾ ನಮ್ಮ ಸರ್ಕಾರದ ಮೇಲಾಗಲಿ, ಅಥವಾ ನಮ್ಮ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳಿಗಾಗಲಿ ಇಲ್ಲಿ ಇರತಕ್ಕಂತಹ ಯಾವ ಸದನದ ಸದಸ್ಯರ ಬಗ್ಗೆಯಾಗಲಿ ನಾನು ಮಾತನಾಡಿಲ್ಲ. ಆದ್ದರಿಂದ ನಿಯಮಾವಳಿ ಪ್ರಕಾರ ಯಾವುದೇ ಸಂದರ್ಭದಲ್ಲಿ ಕೂಡ ಇದು ಚರ್ಚೆಗೆ ಬರುವುದಕ್ಕೆ ಅವಕಾಶ ಇಲ್ಲ. ದಯವಿಟ್ಟು ಅಂಥದ್ದು ಏನಾದರೂ ನಡೆದಿದ್ದರೂ ಕೂಡ ಇದರ ಬಗ್ಗೆ ಚರ್ಚೆಗೆ ಅವಕಾಶ ಇರಬಹುದು. ಇದು ಒಂದೇ ಅಲ್ಲ ಬಹಿರಂಗವಾಗಿ ಆಚೆ ಅನೇಕ ರಾಜಕೀಯ ಒತ್ತಡಗಳಲ್ಲಿ ತಾವೂ ಕೂಡ ಮಾತನಾಡಿರುತ್ತೀರಿ. ನಾನು ಮಾತನಾಡಿರುತ್ತೇನೆ. ಎಲ್ಲರೂ ಮಾತನಾಡತಕ್ಕಂಥದ್ದು ಸಹಜ. ಆದ್ದರಿಂದ ಈ ಹೇಳಿಕೆ ಓದುತೇನೆ ಇದು ಒಂದು ರಾಜಕೀಯ ಪಕ್ಷದ ಹೇಳಿಕೆ ಆಗಿರುವುದೇ ಹೊರತು ಅದನ್ನು ಇಲ್ಲಿಗೆ ಸಮಾಧಾನ ಮಾಡಿ ಸದನ ನಡೆಸುವುದಕ್ಕೆ ತಾವೆಲ್ಲಾ ಅನುಮತಿ ಕೊಡಬೇಕೆಂದು ತಮ್ಮ ಮೂಲಕ ಕೋರಿಕೊಳ್ಳ ಬಯಸುತ್ತೇನೆ.

ಅಧ್ಯಕ್ಷರು :- ಯಡಿಯೂರಪ್ಪನವರೇ, ಮಾನ್ಯ ಪ್ರಕಾಶ್ ಹುಕ್ಕೇರಿ, ಕೃಷಿ ಮಾರುಕಟ್ಟೆ ಸಚಿವರು ಗೌರವಾರ್ಥ ಭೋಜನ ಕೂಟವನು ಬ್ಯಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ನಾನು ನಿರೀಕ್ಷೆ ಮಾಡಿದ್ದೆ, ಕೊನೇ ಪಕ್ಷ ರೇವಣ್ಣನವರು ಸ್ವಾಭಿಮಾನಕ್ಕೆ ದಕ್ಕೆ ಬರುವುದು ಎಂದೂ ಅವರು ಸಹಿಸುವವರೇ ಅಲ್ಲ, ಇಂತಹ ಸಂದರ್ಭದಲ್ಲಿ ನನ್ನ ಬಗ್ಗೆ ವಿನಾ ಕಾರಣ ಆರೋಪ ಮಾಡಿದ್ದಾರೆ. ಎಲಕ್ಟ್ರಾನಿಕ್ ಮೀಡಿಯಾ ಇದೆ, ಸಾಕ್ಷ್ಯಾಧಾರಗಳು ಇವೆ, ನಾನು ಒಂದು ಕ್ಷಣ ಮಂತ್ರಿಯಾಗಿ ಮುಂದುವರಿಯು ವುದಿಲ್ಲವೆಂದು ಹೇಳುತ್ತಾರೆಂದು ನಾನು ಅಂದುಕೊಂಡಿದ್ದೆ. ಮಾನ್ಯ ಶ್ರೀನಿವಾಸರವರು 40-50 ಜನ ಜೈಲಿಗೆ ಹೋಗುವವರು ಇಲ್ಲಿ ಇದ್ದಾರೆ ಎಂದು ನೀವು ಹೇಳಿಕೆಯನ್ನು ಕೊಟ್ಟಿದ್ದೀರಿ. ಈ ಹೇಳಿಕೆ ಕೊಟ್ಟು ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಬಂದಿದೆ. ಈ ರೀತಿ ಹೇಳಿಕೆ ಕೊಡುತ್ತಿದ್ದೀರಿ. ಇದು ಸಾಧು ಅಲ್ಲ. ಯಾರಿಗೂ ಶೋಭೆ ತರುವುದು ಇಲ್ಲ. ಒಬ್ಬ ಜವಾಬ್ದಾರಿಯುತ ಕ್ಯಾಬಿನೆಟ್ ಸಚಿವರು ನಡೆದುಕೊಳ್ಳುವ ರೀತಿ ಇದು ಅಲ್ಲ. ಇದನ್ನು ಖಂಡನೆ ಮಾಡಿ ನಾವು ವಾಕ್‌ಔಟ್ ಮಾಡುತ್ತೇವೆ. ನೀವು ಹೇಗೆ ಬೇಕಾದರೂ ಮಾಡಿ.

(ಈ ಸಂದರ್ಭದಲ್ಲಿ ಭಾರತೀಯ ಜನತಾಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು :- ಸದನವು ಈಗ ಮುಕ್ತಾಯವಾಗಿ ಮತ್ತೆ 2.30 ಗಂಟೆಗೆ ಸೇರಲಿದೆ.

(ಸದನವು 1.20ಕ್ಕೆ ಮುಕ್ತಾಯವಾಗಿ ಮತ್ತೆ ಪುನಃ 2.30ಕ್ಕೆ ಸೇರಲು ನಿಶ್ಚಯಿಸಿತು.)

(ಸದನವು 1.00 ಗಂಟೆ 20 ನಿಮಿಷಕ್ಕೆ ಮುಕ್ತಾಯವಾಗಿ ಪುನಃ 2.20 ಗಂಟೆ 30.00 ನಿಮಿಷಕ್ಕೆ ಸೇರಲು ನಿರ್ಧರಿಸಿತು.)

(ಮತ್ತೆ ಸಭೆಯು ಭೋಜನದ ನಂತರ ಮಧ್ಯಾಹ್ನ 2.50 ಗಂಟೆಗೆ ಸಮಾವೇಶಗೊಂಡಿತು, ಮಾನ್ಯ ಸಭಾಧ್ಯಕ್ಷರು, ಅಧ್ಯಕ್ಷ ಪೀಠವನ್ನಲಂಕರಿಸಿ ದರು)